# 17ನೇ ವಾರ್ಷಿಕ ಸಾಮಾನ್ಯ ಸಭೆ

## 07 ಸೆಪ್ಟೆಂಬರ್ 2018 ಶುಕ್ರವಾರ

ಮಾನ್ಯರೇ,

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 07 ಸೆಪ್ಟೆಂಬರ್ 2018, ಶುಕ್ರವಾರದಂದು, ಕಿಂಗ್ಸ್ ಕೋರ್ಟ್, ಗೇಟ್ ಸಂಖ್ಯೆ 5, ಅರಮನೆ ಆವರಣ, ಬಳ್ಳಾರಿ ರಸ್ತೆ, ಬೆಂಗಳೂರು–560080 ಇಲ್ಲಿ ಬೆಳಿಗ್ಗೆ 10.00 ಗಂಟೆಗೆ ಕರೆಯಲಾಗಿದೆ. ಈ ಸಭೆಗೆ ತಾವು ಆಗಮಿಸಬೇಕಾಗಿ ಕೋರಲಾಗಿದೆ.

### ಈ ಸಭೆಯಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗುವುದು:

1. 17ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
2. 16ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ, ನಿರ್ಣಯಗಳನ್ನು ಹಾಗೂ ಕೈಗೊಳ್ಳಲಾದ ಕ್ರಮಗಳನ್ನು ದೃಢೀಕರಿಸುವುದು.
3. 2017–18ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸುವುದು.
4. 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಪರಿಗಣಿಸುವುದು.
5. 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಅನುಮೋದಿಸುವುದು.
6. 2017–18ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.
7. 2018–19ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
8. 2018–19ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
9. 2018–19ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಅನುಮೋದಿಸುವುದು.
10. 2019–20ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
11. 2019–20ನೇ ಸಾಲಿನ ಕ್ರಿಯಾ ಯೋಜನೆ ಅನುಮೋದಿಸುವುದು.
12. 2019–20ನೇ ಸಾಲಿನ ಮುಂಗಡ ಪತ್ರವನ್ನು ಅನುಮೋದಿಸುವುದು.
13. ಸದಸ್ಯ ಸಹಕಾರಿಗಳಿಗೆ ವೆಬ್ ಆಧಾರಿತ ಕಾಮನ್ ಸಾಫ್ಟ್‌ವೇರ್ ಪೂರೈಸುವ ಕುರಿತು.
14. ಸದಸ್ಯ ಸಹಕಾರಿಗಳಿಗೆ ಕಾಮನ್ ಅಪ್ಲಿಕೇಷನ್ ಫಾರಂಗಳನ್ನು ಪೂರೈಸುವ ಕುರಿತು.
15. ಸೌಹಾರ್ದ ಸಹಕಾರಿಗಳಿಗೆ ಗ್ರೇಡಿಂಗ್ ನೀಡುವ ಕುರಿತು.
16. ಠೇವಣಿ ಖಾತರಿ ಯೋಜನೆಯನ್ನು ಜಾರಿಗೊಳಿಸುವ ಕುರಿತು.
17. ಸಂಯುಕ್ತ ಸಹಕಾರಿಯ ಸ್ವಂತ ನಿವೇಶನದಲ್ಲಿ ಕಟ್ಟಡ ನಿರ್ಮಿಸುವ ಬಗ್ಗೆ ಆಗಿರುವ ಬೆಳವಣಿಗೆಗಳ ಕುರಿತು.
18. ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿಗಳಿಗೆ ನಿವೇಶನ/ ಕಟ್ಟಡ ಖರೀದಿ ಕುರಿತು.
19. ಇತರ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ವರದಿ.
20. ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕನ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ.
21. ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದುಹಾಕಿದ ಬಗೆಗಿನ ಸಂಕ್ಷಿಪ್ತ ವರದಿ.
22. 14, 15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಸೃಜಿಸಲಾದ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪುನರವಲೋಕನ.
23. ಸಂಯುಕ್ತ ಸಹಕಾರಿಯ ಸಿಬ್ಬಂದಿಗಳ ಸೇವಾ ನಿಯಮಗಳ ತಿದ್ದುಪಡಿ ಕುರಿತು.
24. ಸಂಯುಕ್ತ ಸಹಕಾರಿಗೆ ಜಿಎಸ್‌ಟಿ ಅನ್ವಯವಾಗುತ್ತಿರುವ ಕುರಿತು.

25. ಆರ್‌ಟಿಸಿ, ಎನ್‌ಕಮಬ್ರೆನ್ಸ್, ಇನ್ಸೂರೆನ್ಸ್, ಇಫ್ಕೋ, ಜನೌಷಧ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಸಹಕಾರಿಗಳಿಗೆ ಒದಗಿಸುವ ದೃಷ್ಟಿಯಿಂದ ಒಪ್ಪಂದ ಮಾಡಿಕೊಳ್ಳುವ ಕುರಿತು.
26. ಹಿಂದಿನ ಸಹಕಾರಿ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ.
27. ಕಾರ್ಯಾಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರವಲೋಕನ.
28. ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ.
29. ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಲೋಕನ.
30. ಮಂಡಲಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.
31. ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ.
32. ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.
33. ವಸೂಲಾಗದೆಂದು ಪರಿಗಣಿತವಾದ ಸುಸ್ಥಿ ಸಾಲಗಳ ಬಗ್ಗೆ ತೀರ್ಮಾನ.
34. ಮಂಡಲಿಯ ನಿರ್ದೇಶಕರುಗಳನ್ನು ತೆಗೆದುಹಾಕುವುದು.
35. 66ನೇ ಪ್ರಕರಣದ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ.
36. ಮಂಡಲಿಯಿಂದ ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ನಿರಾಕರಿಸಲಾಗಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ.
37. ಉಪವಿಧಿ ತಿದ್ದುಪಡಿ.
38. ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ರಚನೆ.
39. ಸಹಕಾರಿಯ ಸಮಾಪನ.
40. ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ಪ್ರಕ್ರಿಯೆಗಳು.
41. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.

ಆಡಳಿತ ಮಂಡಲಿಯ ಅಪ್ಪಣೆಯ ಮೇರೆಗೆ,

Karnataka State Souharda Federal Cooperative Ltd. Reg. No. RSR / SOU / ACT / 136 / Regn 051 / 2001-02 dated 04-01-2002 * Bangalore *

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

# 17ನೇ ವಾರ್ಷಿಕ ಸಾಮಾನ್ಯ ಸಭೆ

## 07 ಸೆಪ್ಟೆಂಬರ್ 2018

## ಸಭೆಯ ಟಿಪ್ಪಣಿಗಳು

**ವಿಷಯ 1 : 17ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.**

ಟಿಪ್ಪಣಿ : ದಿನಾಂಕ 20 ಆಗಸ್ಟ್ 2018ರಂದು ಕಳುಹಿಸಿದ 17ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡಬಹುದಾಗಿದೆ.

**ವಿಷಯ 2 : 16ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ, ನಿರ್ಣಯಗಳನ್ನು ಹಾಗೂ ಕೈಗೊಳ್ಳಲಾದ ಕ್ರಮಗಳನ್ನು ದೃಢೀಕರಿಸುವುದು.**

ಟಿಪ್ಪಣಿ : ದಿನಾಂಕ 16 ಸೆಪ್ಟೆಂಬರ್ 2017ರಂದು ಬೆಂಗಳೂರಿನಲ್ಲಿ ನಡೆದ 16ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ, ನಿರ್ಣಯ ಹಾಗೂ ಕೈಗೊಳ್ಳಲಾದ ಕ್ರಮಗಳನ್ನು ಪುಟ ಸಂಖ್ಯೆ 34–60 ರಲ್ಲಿ ನೀಡಿದ್ದು, ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 3 : 2017–18ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸುವುದು.**

ಟಿಪ್ಪಣಿ : 2017–18ನೇ ಸಾಲಿನ ಸಂಯುಕ್ತ ಸಹಕಾರಿಯ ವಾರ್ಷಿಕ ವರದಿಯನ್ನು ಈ ನೋಟೀಸಿನೊಂದಿಗೆ ಪುಟ ಸಂಖ್ಯೆ 13–33 ರಲ್ಲಿ ನೀಡಿದ್ದು, ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 4 : 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಪರಿಗಣಿಸುವುದು.**

ಟಿಪ್ಪಣಿ : ಈ ನೋಟೀಸಿನೊಂದಿಗೆ ಸನ್ನದು ಲೆಕ್ಕಪರಿಶೋಧಕರಾದ ಮೆ. ಎಸ್‌ಕೆಎಬಿ ಅಸೋಸಿಯೇಟ್ಸ್, ಬೆಂಗಳೂರು ಇವರು ನೀಡಿದ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಆರ್ಥಿಕ ತಃಖ್ತೆಗಳನ್ನು ಯಥಾವತ್ತಾಗಿ (Scaned Copy) ಪುಟ ಸಂಖ್ಯೆ 61–101 ರಲ್ಲಿ ನೀಡಲಾಗಿದೆ. ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 5 : 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಅನುಮೋದಿಸುವುದು.**

ಟಿಪ್ಪಣಿ : ಈ ನೋಟೀಸಿನೊಂದಿಗೆ ಸನ್ನದು ಲೆಕ್ಕಪರಿಶೋಧಕರಾದ ಮೆ. ಎಸ್‌ಕೆಎಬಿ ಅಸೋಸಿಯೇಟ್ಸ್, ಬೆಂಗಳೂರು ಇವರು ನೀಡಿದ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಪುಟ ಸಂಖ್ಯೆ 109–112 ರಲ್ಲಿ ನೀಡಲಾಗಿದೆ. ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 6 : 2017–18ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.**

ಟಿಪ್ಪಣಿ : 2017–18ನೇ ಸಾಲಿನಲ್ಲಿ ಮುಂಗಡ ಪತ್ರಕ್ಕಿಂತ (ಆಡಳಿತ, ಇ–ಸ್ಟಾಂಪಿಂಗ್ ಮತ್ತು ಶಿಕ್ಷಣ ವಿಭಾಗಗಳ ಒಟ್ಟು ಮೊತ್ತ) ಕೆಲವು ಶೀರ್ಷಿಕೆಗಳಡಿ ಹೆಚ್ಚಿನ ವೆಚ್ಚವಾಗಿರುವುದನ್ನು ಹಾಗೂ ಅದಕ್ಕೆ ಕಾರಣಗಳನ್ನು ಪುಟ ಸಂಖ್ಯೆ 113 ರಲ್ಲಿ ನೀಡಲಾಗಿದೆ. ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 7 : 2018–19ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.**

ಟಿಪ್ಪಣಿ : 2018–19ನೇ ಸಾಲಿಗೆ ಲೆಕ್ಕಪರಿಶೋಧಕರನ್ನಾಗಿ ಈ ಕೆಳಗಿನ ಸಂಸ್ಥೆಗಳಲ್ಲಿ ಒಂದನ್ನು ನೇಮಕ ಮಾಡಬಹುದಾಗಿದೆ ಹಾಗೂ ಅವರಿಗೆ ನೀಡಬಹುದಾದ ಸಂಭಾವನೆಯನ್ನು ನಿಗದಿಪಡಿಸಬಹುದಾಗಿದೆ.

| ಕ್ರ.ಸಂ. | ಸಂಸ್ಥೆಯ ಹೆಸರು | ಸ್ಥಳ | ಅನುಭವ | ಶ್ರೇಣಿ |
|---|---|---|---|---|
| 1. | ಮೆ. ಎಸ್‌ಕೆಎಬಿ & ಅಸೋಸಿಯೇಟ್ಸ್ | ಬೆಂಗಳೂರು | 14 | ಎ |
| 2. | ಮೆ. ಅನಂತ ಹೆಚ್. ಮುತಾಲಿಕ್ | ಬೆಂಗಳೂರು | 23 | ಎ |
| 3. | ಮೆ. ಎಂ.ಎಸ್.ಕಾಮತ್ & ಅಸೋಸಿಯೇಟ್ಸ್ | ಬೆಂಗಳೂರು | 35 | ಎ |

**ವಿಷಯ 8 : 2018–19ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.**

ಟಿಪ್ಪಣಿ : ಈ ನೋಟೀಸಿನೊಂದಿಗೆ ಪುಟ ಸಂಖ್ಯೆ 124–128 ರಲ್ಲಿ ನೀಡಲಾದ 2018–19ನೇ ಸಾಲಿನ ಸಂಯುಕ್ತ ಸಹಕಾರಿಯ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 9 : 2018–19ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಅನುಮೋದಿಸುವುದು.**

ಟಿಪ್ಪಣಿ : 16ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದಿತವಾದ 2018–19ನೇ ಸಾಲಿನ ಮುಂಗಡ ಪತ್ರವನ್ನು 2017–18ನೇ ಸಾಲಿನ ಆರ್ಥಿಕ ವರದಿಗಳು ಹಾಗೂ 2018–19ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಆಧಾರದಲ್ಲಿ ಪರಿಷ್ಕರಿಸಲಾಗಿದ್ದು, ಅದನ್ನು ಈ ನೋಟೀಸಿನೊಂದಿಗೆ ಪುಟ ಸಂಖ್ಯೆ 114–118 ರಲ್ಲಿ ನೀಡಲಾಗಿದೆ. ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 10 : 2019–20ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.**

ಟಿಪ್ಪಣಿ : 2019–20ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರನ್ನಾಗಿ ಈ ಕೆಳಗಿನ ಸಂಸ್ಥೆಗಳಲ್ಲಿ ಒಂದನ್ನು ನೇಮಕ ಮಾಡಬಹುದಾಗಿದೆ ಹಾಗೂ ಅವರಿಗೆ ನೀಡಬಹುದಾದ ಸಂಭಾವನೆಯನ್ನು ನಿಗದಿಪಡಿಸಬಹುದಾಗಿದೆ.

| ಕ್ರ.ಸಂ. | ಸಂಸ್ಥೆಯ ಹೆಸರು | ಸ್ಥಳ | ಅನುಭವ | ಶ್ರೇಣಿ |
|---|---|---|---|---|
| 1. | ಬಿ ಆರ್ ಆರ್ & ಕೋ., | ಬೆಂಗಳೂರು | 12 | ಎ |
| 2. | ಮೆ. ಪುರಾಣಿಕ್ & ಹೆಬ್ಬಾರ್ | ಬೆಂಗಳೂರು | 14 | ಎ |
| 3. | ಮೆ. ಆರ್‌ಎಸ್‌ಬಿ & ಅಸೋಸಿಯೇಟ್ಸ್ | ಬೆಂಗಳೂರು | 15 | ಎ |

**ವಿಷಯ 11 : 2019–20ನೇ ಸಾಲಿನ ಕ್ರಿಯಾ ಯೋಜನೆ ಅನುಮೋದಿಸುವುದು.**

ಟಿಪ್ಪಣಿ : ಈ ನೋಟೀಸಿನೊಂದಿಗೆ ಪುಟ ಸಂಖ್ಯೆ 129–132 ರಲ್ಲಿ ನೀಡಲಾದ ಸಂಯುಕ್ತ ಸಹಕಾರಿಯ 2019–20ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸಬಹುದಾಗಿದೆ.

**ವಿಷಯ 12 : 2019–20ನೇ ಸಾಲಿನ ಮುಂಗಡ ಪತ್ರವನ್ನು ಅನುಮೋದಿಸುವುದು.**

ಟಿಪ್ಪಣಿ : ಈ ನೋಟೀಸಿನೊಂದಿಗೆ ಪುಟ ಸಂಖ್ಯೆ 119–123 ರಲ್ಲಿ ನೀಡಲಾದ ಸಂಯುಕ್ತ ಸಹಕಾರಿಯ 2019–20ನೇ ಸಾಲಿನ ಮುಂಗಡ ಪತ್ರವನ್ನು ಅನುಮೋದಿಸಬಹುದಾಗಿದೆ.

**ವಿಷಯ 13 : ಸದಸ್ಯ ಸಹಕಾರಿಗಳಿಗೆ ವೆಬ್ ಆಧಾರಿತ ಕಾಮನ್ ಸಾಫ್ಟ್‌ವೇರ್ ಪೂರೈಸುವ ಕುರಿತು.**

ಟಿಪ್ಪಣಿ : ಸಂಯುಕ್ತ ಸಹಕಾರಿಯ ಹಿಂದಿನ ಸಾಮಾನ್ಯ ಸಭೆಯಿಂದ ಅನುಮೋದಿತವಾದಂತೆ ವೆಬ್ ಆಧಾರಿತ ಕಾಮನ್ ಸಾಫ್ಟ್‌ವೇರ್ ಕುರಿತು ಟೆಕ್ನಿಕಲ್ ಬಿಡ್ ಹಾಗೂ ಹಣಕಾಸು ಬಿಡ್ ನಡೆಸಿ, ಅರ್ಹತೆ ಗಳಿಸಿದ ಕಂಪನಿಗಳ ಡೆಮೋ ನೋಡಿ, ಸಿ–ಎಡ್ಜ್, ಓವರ್ ಡ್ರೈವ್, ವಿ– ಸಾಫ್ಟ್, ಫಾರ್ಚೂನ್ ಇನ್ಫೋಸರ್ವ್, ಸಿದ್‌ಸಾಫ್ಟ್, ಮೆಗಾಸಾಫ್ಟ್ ಹಾಗೂ ನೇವಿಪ್ಲಸ್ ಸಾಫ್ಟ್‌ವೇರ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ಈ 7 ಕಂಪನಿಗಳ ಪಟ್ಟಿಯನ್ನು ಸಿದ್ಧಪಡಿಸಿ, ವಿವರವಾದ ಸುತ್ತೋಲೆಯೊಂದಿಗೆ ಎಲ್ಲಾ ಸಹಕಾರಿಗಳಿಗೆ ಕಳುಹಿಸಲಾಗಿದೆ. ಪ್ರತಿ ಶಾಖೆಗೆ ಪ್ರತಿ ತಿಂಗಳಿಗೆ ರೂ.2000/– ಬಾಡಿಗೆ ನಿಗದಿಪಡಿಸಲಾಗಿದೆ. ಇದನ್ನು ಅನುಮೋದಿಸಬಹುದಾಗಿದೆ ಹಾಗೂ ಯಾವುದೇ ಸಲಹೆಗಳು ಇದ್ದರೆ ನೀಡಬಹುದಾಗಿದೆ.

**ವಿಷಯ 14 : ಸದಸ್ಯ ಸಹಕಾರಿಗಳಿಗೆ ಕಾಮನ್ ಅಪ್ಲಿಕೇಷನ್ ಫಾರಂಗಳನ್ನು ಪೂರೈಸುವ ಕುರಿತು.**

ಟಿಪ್ಪಣಿ : ಸದಸ್ಯ ಸಹಕಾರಿಗಳಿಗೆ ಕಾಮನ್ ಅಪ್ಲಿಕೇಷನ್ ಫಾರಂಗಳನ್ನು ಪೂರೈಸುವ ಕುರಿತು ಸೂಕ್ತವಾಗಿ ನಿರ್ಣಯಿಸಬಹುದಾಗಿದೆ.

**ವಿಷಯ 15 : ಸೌಹಾರ್ದ ಸಹಕಾರಿಗಳಿಗೆ ಗ್ರೇಡಿಂಗ್ ನೀಡುವ ಕುರಿತು.**

ಟಿಪ್ಪಣಿ : ಸೌಹಾರ್ದ ಸಹಕಾರಿಗಳಿಗೆ ಅವುಗಳ ಕಾರ್ಯನಿರ್ವಹಣೆಯ ಮತ್ತು ಪ್ರಮುಖ ಅಂಶಗಳ ಆಧಾರದ ಪ್ರತಿ ಸಹಕಾರಿಯನ್ನು ಎ, ಬಿ, ಸಿ, ಡಿ ಅಥವಾ ಇ ಎಂದು ವರ್ಗೀಕರಿಸಬಹುದಾಗಿದೆ.

ಸಹಕಾರಿಗಳ ಗ್ರೇಡಿಂಗ್‌ಗೆ ಪರಿಗಣಿಸಬಹುದಾದ ಅಂಶಗಳು :

- ಶಾಸನಾತ್ಮಕ ಕರ್ತವ್ಯಗಳ ನಿರ್ವಹಣೆ
- ಪ್ರಾಧಿಕಾರಗಳಿಗೆ ವರದಿ/ ಮಾಹಿತಿ ಸಲ್ಲಿಕೆ
- ಕಾಯ್ದೆ, ನಿಯಮಗಳು, ಉಪವಿಧಿಗಳ ಪಾಲನೆ
- ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ಇತರೆ ಕಾಯ್ದೆಗಳ ಪಾಲನೆ

- ಸಂಯುಕ್ತ ಸಹಕಾರಿಯ ಸುತ್ತೋಲೆಗಳ ಪಾಲನೆ
- ಸಹಕಾರ ತತ್ವಗಳ ಪಾಲನೆ
- ಸಹಕಾರಿಯ ದುಡಿಯುವ ಬಂಡವಾಳ
- ನಿವ್ವಳ ಸ್ವಂತ ಬಂಡವಾಳ
- ಹೂಡಿಕೆ
- ಸಾಲಗಳ ಮರುಪಾವತಿ
- ಆಸ್ತಿಗಳು
- ಬಡ್ಡಿ ದರ
- ಬೆಳವಣಿಗೆ ದರ
- ನಿರ್ದೇಶಕರ ಸಹಭಾಗಿತ್ವ
- ಸದಸ್ಯರ ಭಾಗವಹಿಸುವಿಕೆ
- ಸಹಕಾರ ಚಳುವಳಿಗೆ ಕೊಡುಗೆ
- ಸ್ಥಳೀಯವಾಗಿ ಇರುವ ಸ್ಥಾನಮಾನ
- ದೂರುಗಳು
- ಸಂಶಯಾತ್ಮಕ ಚಟುವಟಿಕೆಗಳು
- ಸಂಯುಕ್ತ ಸಹಕಾರಿಯ ತರಬೇತಿಯಲ್ಲಿ ಭಾಗವಹಿಸುವಿಕೆ
- ಸ್ಥಳೀಯವಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ
- ಸಹಕಾರಿಯ ಚಟುವಟಿಕೆ

ಈ ಮೇಲಿನ ಅಂಶಗಳ ಆಧಾರದಲ್ಲಿ ಪ್ರತಿ ಸಹಕಾರಿಯನ್ನು ಎ, ಬಿ, ಸಿ, ಡಿ ಅಥವಾ ಇ ಎಂದು ವರ್ಗೀಕರಿಸಬೇಕು.

ಎ – ಉತ್ತಮ ಸೌಹಾರ್ದ ಸಹಕಾರಿ
ಬಿ – ಮಧ್ಯಮ ಸೌಹಾರ್ದ ಸಹಕಾರಿ
ಸಿ – ಸಾಧಾರಣ ಸೌಹಾರ್ದ ಸಹಕಾರಿ
ಡಿ – ಸಮಸ್ಯಾತ್ಮಕ ಸೌಹಾರ್ದ ಸಹಕಾರಿ
ಇ – ಸಮಾಪನೆಗೆ ಶಿಫಾರಸ್ಸು ಮಾಡಬೇಕಾದ ಸೌಹಾರ್ದ ಸಹಕಾರಿ

ಈ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳಿಗೆ ಗ್ರೇಡಿಂಗ್ ನೀಡುವ ಕುರಿತು ಸೂಕ್ತವಾಗಿ ನಿರ್ಣಯಿಸಬಹುದಾಗಿದೆ.

**ವಿಷಯ 16 : ಠೇವಣಿ ಖಾತರಿ ಯೋಜನೆಯನ್ನು ಜಾರಿಗೊಳಿಸುವ ಕುರಿತು.**

ಟಿಪ್ಪಣಿ : ಸದಸ್ಯ ಸಹಕಾರಿಗಳಲ್ಲಿನ ಠೇವಣಿಗಳಿಗೆ ಠೇವಣಿ ಖಾತರಿ ಯೋಜನೆಯನ್ನು ರೂಪಿಸಿದ್ದು, ಕರಡನ್ನು ಪುಟ ಸಂಖ್ಯೆ 162–170 ರಲ್ಲಿ ನೀಡಿದೆ. ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 17 : ಸಂಯುಕ್ತ ಸಹಕಾರಿಯ ಸ್ವಂತ ನಿವೇಶನದಲ್ಲಿ ಕಟ್ಟಡ ನಿರ್ಮಿಸುವ ಬಗ್ಗೆ ಆಗಿರುವ ಬೆಳವಣಿಗೆಗಳ ಕುರಿತು.**

ಟಿಪ್ಪಣಿ : ದಿನಾಂಕ 08 ನವೆಂಬರ್ 2017ರ ಆಡಳಿತ ಮಂಡಲಿ ಸಭೆಯ ನಿರ್ಣಯದಂತೆ ಸಂಯುಕ್ತ ಸಹಕಾರಿಯ ಸ್ವಂತ ನಿವೇಶನದಲ್ಲಿ ಕಟ್ಟಡವನ್ನು ನಿರ್ಮಿಸುವ ಕುರಿತು ಹಾಗೂ ಕಟ್ಟಡ ನಿರ್ಮಿಸುವ ಕುರಿತಂತೆ ಮಾನ್ಯ ಅಧ್ಯಕ್ಷರು, ಮಾನ್ಯ ಉಪಾಧ್ಯಕ್ಷರು, ಶ್ರೀ ವಿಶ್ವನಾಥ ಚ. ಹಿರೇಮಠ, ಶ್ರೀ ಬಿ.ಗಂಗಾಧರಯ್ಯ, ಶ್ರೀ ಹೆಚ್.ವಿ.ರಾಜೀವ್, ಶ್ರೀ ಬಿ.ಎಸ್.ಗುಂಡೂರಾವ್, ಶ್ರೀ ಎ.ಆರ್.ಪ್ರಸನ್ನ ಕುಮಾರ್ ಹಾಗೂ ವ್ಯವಸ್ಥಾಪಕ ನಿರ್ದೇಶಕರನ್ನೊಳಗೊಂಡಂತೆ ಸಮಿತಿಯನ್ನು ರಚಿಸಲು ಮತ್ತು ಅಗತ್ಯವಿದ್ದಲ್ಲಿ ಮಾಹಿತಿ/ ಸಲಹೆ/ ಮಾರ್ಗದರ್ಶನವನ್ನು ಪಡೆಯಲು ಬಾಹ್ಯ ತಜ್ಞರಾದ ಶ್ರೀ ಶ್ರೀಧರ್ ನೀಲಕಂಠರಾವ್ ಹಾಗೂ ಶ್ರೀ ನಾಗೇಂದ್ರ ಗುಪ್ತಾ ಇವರುಗಳನ್ನು ವಿಶೇಷ ಆಹ್ವಾನಿತರನ್ನಾಗಿ ಆಹ್ವಾನಿಸಲು ಸರ್ವಾನುಮತದಿಂದ ತೀರ್ಮಾನಿಸಿರುವಂತೆ ಈ ಸಮಿತಿಯ ಉಸ್ತುವಾ–

ರಿಯಲ್ಲಿ ಕಟ್ಟಡ ನಿರ್ಮಾಣ ಕಾರ್ಯವನ್ನು ನಡೆಸಲಾಗುತ್ತಿದೆ.

- ದಿನಾಂಕ 21 ಡಿಸೆಂಬರ್ 2017ರಂದು ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಲಾಗಿರುವ ರೆಕ್ಟಿಫಿಕೇಷನ್ ಡೀಡ್ ಮತ್ತು ಸಿಲೋಮ್ ಜಿಯೋಟೆಕ್ ಸರ್ವೀಸಸ್ ಎಲ್‌ಎಲ್‌ಪಿರವರಿಂದ ಮಣ್ಣಿನ ಪರೀಕ್ಷೆಯನ್ನು ನಡೆಸಲಾಗಿದೆ.
- ಮಲ್ಲೇಶ್ವರದ ಮಾರ್ಗೋಸಾ ರಸ್ತೆಯ ನಿವೇಶನದಲ್ಲಿನ ಸಂಯುಕ್ತ ಸಹಕಾರಿಯ ಕಛೇರಿಯ ಉದ್ದೇಶಿತ ಕಟ್ಟಡಕ್ಕೆ ಬಿಬಿಎಂಪಿ ನಿಯಮಗಳ ಪ್ರಕಾರ ನೀಲಿನಕ್ಷೆಯನ್ನು ಸಿದ್ಧಪಡಿಸಿ, ಬಿಬಿಎಂಪಿಯಿಂದ ಅನುಮೋದನೆ ಪಡೆಯಲಾಗಿದೆ.
- ನಿವೇಶನದ ಸುತ್ತಲೂ ಮೆಟಲ್ ಶೀಟ್‌ಗಳನ್ನು ಅಳವಡಿಸಿ, ಕಟ್ಟಡ ನಿರ್ಮಾಣದ ಸಲುವಾಗಿ ಪ್ರಸ್ತುತವಿರುವ ಕಟ್ಟಡವನ್ನು ಕೆಡವಲಾಗಿದೆ. ಕಟ್ಟಡ ಕೆಡವುದರಿಂದ ಉಂಟಾಗಿರುವ ಮಣ್ಣು ಹಾಗೂ ಅನುಪಯುಕ್ತ ವಸ್ತುಗಳನ್ನು ನಗರದಿಂದ ದೂರಕ್ಕೆ ಕೊಂಡೊಯ್ಯಲಾಗಿದೆ.
- ಬಿಇ ಸಿವಿಲ್ ಆಗಿರುವ ಓರ್ವ ಸೈಟ್ ಇಂಜಿಯನಿಯರ್ ನೇಮಕ ಮಾಡಿಕೊಳ್ಳುವ ಮೂಲಕ ಕಟ್ಟಡ ನಿರ್ಮಾಣ ಕಾರ್ಯವನ್ನು ಆದ್ಯತೆ ಮೇರೆಗೆ ನಿರ್ವಹಿಸಲು ಕ್ರಮವಿಡಲಾಗಿದೆ.
- ಕಟ್ಟಡ ನಿರ್ಮಾಣದ ಗುತ್ತಿಗೆಯನ್ನು ನೀಡಲು ಟೆಂಡರ್ ಕರೆಯಲಾಗಿತ್ತು, ಅದರಂತೆ ಟೆಂಡರ್ ಸಲ್ಲಿಕೆಯಾಗಿದ್ದ 3 ಸಂಸ್ಥೆಗಳ ತುಲನಾತ್ಮಕ ಪಟ್ಟಿ ಮತ್ತು ಫೈನಾಷಿಯಲ್ ಬಿಡ್‌ನಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ದರಪಟ್ಟಿಯ ಹಾಗೂ ಗುಣಾತ್ಮಕತೆಯ ಆಧಾರದ ಮೇಲೆ ಎಲ್1, ಎಲ್2, ಎಲ್3 ಎಂದು ಪರಿಗಣಿಸಿ, ಪ್ರಿಸೈಸ್ ಎಂಟರ್‌ಪ್ರೈಸಸ್ ಇವರನ್ನು ಎಲ್1 ಸಂಸ್ಥೆ (ರೂ. 5 ಕೋಟಿ 20 ಲಕ್ಷ) ಎಂದು ಪರಿಗಣಿಸಿ, ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ಉದ್ದೇಶಿತ ಕಟ್ಟಡದ ನಿರ್ಮಾಣ ಕೆಲಸ ಕಾರ್ಯಗಳನ್ನು ಒಪ್ಪಿಸಲಾಗಿದೆ.
- ಕಟ್ಟಡದ ನಿರ್ಮಾಣ ಅವಧಿಯನ್ನು ಕಾರ್ಯಾದೇಶ ನೀಡಿದ ದಿನಾಂಕದಿಂದ 10 ತಿಂಗಳುಗಳು ಹಾಗೂ 2 ತಿಂಗಳು ದಂಡರಹಿತ ಅವಧಿಯನ್ನು ನೀಡಲಾಗಿದೆ.
- ಪ್ರಸ್ತುತ ಕಟ್ಟಡದ ಬೇಸ್‌ಮೆಂಟ್ ಕಾರ್ಯವನ್ನು ನಿರ್ವಹಿಸಲಾಗುತ್ತಿದ್ದು, ಕಟ್ಟಡ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ.

**ವಿಷಯ 18 : ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿಗಳಿಗೆ ನಿವೇಶನ/ ಕಟ್ಟಡ ಖರೀದಿ ಕುರಿತು.**

ಟಿಪ್ಪಣಿ : ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಈಗಾಗಲೇ ನಿವೇಶನ ಖರೀದಿಸಿದ್ದು, ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಅದೇ ರೀತಿ, ಬೆಳಗಾವಿ ಪ್ರಾಂತದಲ್ಲಿ ಸಹ ನಿವೇಶನ ಖರೀದಿಸಲಾಗಿದೆ. ಉಳಿದ ಕಲಬುರಗಿ ಮತ್ತು ಮೈಸೂರು ಪ್ರಾಂತೀಯ ಕಛೇರಿಗಳಿಗೂ ಸಹ ನಿವೇಶನ ಖರೀದಿಸುವ ಕುರಿತು ಚರ್ಚಿಸಿ ನಿರ್ಣಯಿಸಬಹುದಾಗಿದೆ.

**ವಿಷಯ 19 : ಇತರ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ವರದಿ.**

ಟಿಪ್ಪಣಿ : ಸಂಯುಕ್ತ ಸಹಕಾರಿಯು ಈ ಕೆಳಗಿನ ಸಹಕಾರ ಸಂಸ್ಥೆಗಳಲ್ಲಿ ಸದಸ್ಯತ್ವ ಹೊಂದಿದ್ದು, ಅದನ್ನು ಮುಂದುವರೆಸಿಕೊಂಡು ಹೋಗುವ ಕುರಿತು ನಿರ್ಣಯಿಸಬಹುದಾಗಿದೆ.

| ಸಂಸ್ಥೆಯ ಹೆಸರು | ಶೇರು ಮೊತ್ತ |
|---|---|
| ರಾಷ್ಟ್ರೀಯ ಯುವ ಕೋಆಪರೇಟಿವ್ ಲಿ., ನವದೆಹಲಿ | ರೂ.1,000.00 |
| ರಾಷ್ಟ್ರೀಯ ಸಹಕಾರ ಮಹಾಮಂಡಲ ನಿ., ನವದೆಹಲಿ | ಇಲ್ಲ |
| ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು | ರೂ.10,10,000.00 |
| ಕ. ರಾ. ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು | ರೂ.10,00,000.00 |

**ವಿಷಯ 20 : ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕನ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ.**

ಟಿಪ್ಪಣಿ : ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕರ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವುದಿಲ್ಲ.

**ವಿಷಯ 21 : ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದುಹಾಕಿದ ಬಗೆಗಿನ ಸಂಕ್ಷಿಪ್ತ ವರದಿ.**

ಟಿಪ್ಪಣಿ : 2017–18ನೇ ಸಾಲಿನಲ್ಲಿ ನೂತನವಾಗಿ 303 ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಸದಸ್ಯರಾಗಿ ಸೇರ್ಪಡೆಯಾಗಿರುತ್ತಾರೆ. ಅಂತಹ ಸಹಕಾರಿಗಳ ಹೆಸರುಗಳನ್ನು ಪುಟ ಸಂಖ್ಯೆ 136–144 ರಲ್ಲಿ ನೀಡಿದೆ ಹಾಗೂ ಒಂದು ಸಹಕಾರಿಯು ಸಮಾಪನೆಯ ಕಾರಣದಿಂದ ಮತ್ತು ಇನ್ನೊಂದು ಸಹಕಾರಿಯು ವಿಭಜನೆಯ ಕಾರಣದಿಂದ ನೋಂದಣಿ ರದ್ದಾಗಿರುವುದರಿಂದ ಸದಸ್ಯತ್ವವನ್ನು ಕಳೆದುಕೊಂಡಿರುತ್ತದೆ. ಇದನ್ನು ಪರಿಗಣಿಸಬಹುದಾಗಿದೆ.

**ವಿಷಯ 22 : 14, 15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಸೃಜಿಸಲಾದ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪುನರವಲೋಕನ.**

ಟಿಪ್ಪಣಿ : ಸಂಯುಕ್ತ ಸಹಕಾರಿಯ ಹಿಂದಿನ ಅಂದರೆ 16ನೇ ವಾರ್ಷಿಕ ಸಾಮಾನ್ಯ ಸಭೆಯ ವಿಷಯ ಸಂಖ್ಯೆ 12ರಲ್ಲಿ ಚರ್ಚಿಸಿ, ಸಂಯುಕ್ತ ಸಹಕಾರಿಯ ಪೂರಕ ಸಂಸ್ಥೆಯಾದ ಸಹಕಾರ ಅಭಿವೃದ್ಧಿ ಪ್ರತಿಷ್ಠಾನ ಕರ್ನಾಟಕ ಸಂಸ್ಥೆಯು ಯಾವುದೇ ಚಟುವಟಿಕೆಗಳನ್ನು ನಡೆಸುತ್ತಿಲ್ಲದೇ ಇರುವುದರಿಂದ ಸಮಾಪನೆಗೊಳಿಸಲು ನಿರ್ಣಯಿಸಿರುವಂತೆ ಸದರಿ ಸಂಸ್ಥೆಯ ಸಮಾಪನಾ ಕಾರ್ಯವು ಪ್ರಗತಿಯಲ್ಲಿದ್ದು, ಸಹಕಾರ ಅಭಿವೃದ್ಧಿ ಪ್ರತಿಷ್ಠಾನ ಕರ್ನಾಟಕದ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ನೀಡಲಾಗಿದ್ದು, ಪುಟ ಸಂಖ್ಯೆ 133–135 ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 23 : ಸಂಯುಕ್ತ ಸಹಕಾರಿಯ ಸಿಬ್ಬಂದಿಗಳ ಸೇವಾ ನಿಯಮಗಳ ತಿದ್ದುಪಡಿ ಕುರಿತು.**

ಟಿಪ್ಪಣಿ : ಈಗಾಗಲೇ ಸಾಮಾನ್ಯ ಸಭೆಯಿಂದ ಅನುಮೋದಿತವಾದ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳ ಸೇವಾ ನಿಯಮಗಳಿಗೆ ಅಗತ್ಯವಾದ ಕೆಲವು ತಿದ್ದುಪಡಿಗಳನ್ನು ಪುಟ ಸಂಖ್ಯೆ 145–161 ರಲ್ಲಿ ನೀಡಿದೆ. ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 24 : ಸಂಯುಕ್ತ ಸಹಕಾರಿಗೆ ಜಿಎಸ್‌ಟಿ ಅನ್ವಯವಾಗುತ್ತಿರುವ ಕುರಿತು.**

ನಿರ್ಣಯ : ದೇಶದಲ್ಲಿ ನೂತನ ಸರಕು ಮತ್ತು ಸೇವಾ ತೆರಿಗೆ ಅನ್ವಯವಾದ ನಂತರ ಸಂಯುಕ್ತ ಸಹಕಾರಿಯು ಸ್ವೀಕರಿಸುತ್ತಿರುವ ವಾರ್ಷಿಕ ಶುಲ್ಕ, ಮತ್ತಿತರ ಸ್ವೀಕೃತಿಗಳು ಸೇವಾ ತೆರಿಗೆ ವ್ಯಾಪ್ತಿಗೆ ಬರುತ್ತವೆ ಎಂದು ಲೆಕ್ಕಪರಿಶೋಧಕರು ತಿಳಿಸಿದ ಹಿನ್ನೆಲೆಯಲ್ಲಿ ಈ ಕುರಿತು ತಜ್ಞರಿಂದ ಕಾನೂನು ಅಭಿಪ್ರಾಯವನ್ನು ಪಡೆದುಕೊಂಡಿದ್ದು, ಅದರಂತೆ ಸಂಯುಕ್ತ ಸಹಕಾರಿಯು ಸ್ವೀಕರಿಸುತ್ತಿರುವ ವಾರ್ಷಿಕ ಶುಲ್ಕ, ತರಬೇತಿಗಳ ಪ್ರತಿನಿಧಿ ಶುಲ್ಕಗಳು ಸೇವಾ ತೆರಿಗೆ ವ್ಯಾಪ್ತಿಗೆ ಒಳಪಡುತ್ತದೆ. ಶಿಕ್ಷಣ ನಿಧಿ, ಬಡ್ಡಿ, ಮತ್ತಿತರ ಆದಾಯಗಳು ಸೇವಾ ತೆರಿಗೆ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ತಜ್ಞರು ಅಭಿಪ್ರಾಯ ನೀಡಿರುತ್ತಾರೆ. ಆದಾಗ್ಯೂ, ಸಂಯುಕ್ತ ಸಹಕಾರಿಯು ಸ್ವೀಕರಿಸುವ ವಾರ್ಷಿಕ ಶುಲ್ಕಕ್ಕೆ ಜಿಎಸ್‌ಟಿ ಕಾಯ್ದೆಯಿಂದ ವಿನಾಯಿತಿ ನೀಡುವಂತೆ ಜಿಎಸ್‌ಟಿ ಮಂಡಳಿಗೆ ಪತ್ರ ನೀಡಲಾಗಿದೆ. ಅವರಿಂದ ಉತ್ತರದ ನಿರೀಕ್ಷೆಯಲ್ಲಿದ್ದೇವೆ. ಒಂದು ವೇಳೆ, ವಿನಾಯಿತಿ ಸಿಗದಿದ್ದಲ್ಲಿ ಎಲ್ಲಾ ಸಹಕಾರಿಗಳು ವಾರ್ಷಿಕ ಶುಲ್ಕದ ಜೊತೆಯಲ್ಲಿ ಅನ್ವಯವಾಗುವ ಜಿಎಸ್‌ಟಿಯನ್ನು ಸೇರಿಸಿ ಪಾವತಿಸಬೇಕಾಗುತ್ತದೆ. ಇದನ್ನು ಪರಿಶೀಲಿಸಿ ಸೂಕ್ತವಾಗಿ ನಿರ್ಣಯಿಸಬಹುದಾಗಿದೆ.

**ವಿಷಯ 25 : ಆರ್‌ಟಿಸಿ, ಎನ್‌ಕಮಬ್ರೆನ್ಸ್, ಇನ್ಶೂರೆನ್ಸ್, ಇಫ್ಕೋ, ಜನೌಷಧ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಸಹಕಾರಿಗಳಿಗೆ ಒದಗಿಸುವ ದೃಷ್ಟಿಯಿಂದ ಒಪ್ಪಂದ ಮಾಡಿಕೊಳ್ಳುವ ಕುರಿತು.**

ಟಿಪ್ಪಣಿ : ಸೌಹಾರ್ದ ಸಹಕಾರಿಗಳ ಮೂಲಕ ಆರ್‌ಟಿಸಿ, ಎನ್‌ಕಮಬ್ರೆನ್ಸ್, ಇನ್ಶೂರೆನ್ಸ್, ಇಫ್ಕೋ, ಜನೌಷಧ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಒಪ್ಪಂದ ಮಾಡಿಕೊಳ್ಳುವ ಕುರಿತು ಸೂಕ್ತವಾಗಿ ನಿರ್ಣಯಿಸಬಹುದಾಗಿದೆ.

**ವಿಷಯ 26 : ಹಿಂದಿನ ಸಹಕಾರಿ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ.**

ಟಿಪ್ಪಣಿ : ಅನ್ವಯಿಸುವುದಿಲ್ಲ.

**ವಿಷಯ 27 : ಕಾರ್ಯಾಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರವಲೋಕನ.**

ಟಿಪ್ಪಣಿ : ಅನ್ವಯಿಸುವುದಿಲ್ಲ.

**ವಿಷಯ 28 : ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ.**

ಟಿಪ್ಪಣಿ : ಅನ್ವಯಿಸುವುದಿಲ್ಲ.

**ವಿಷಯ 29 : ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಲೋಕನ.**

ಟಿಪ್ಪಣಿ : ಅನ್ವಯಿಸುವುದಿಲ್ಲ.

**ವಿಷಯ 30 : ಮಂಡಲಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.**

ಟಿಪ್ಪಣಿ : ಅನ್ವಯಿಸುವುದಿಲ್ಲ.

**ವಿಷಯ 31 : ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ.**

ಟಿಪ್ಪಣಿ : ಅನ್ವಯಿಸುವುದಿಲ್ಲ.

**ವಿಷಯ 32 : ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.**

ಟಿಪ್ಪಣಿ : ಅನ್ವಯಿಸುವುದಿಲ್ಲ.

**ವಿಷಯ 33 : ವಸೂಲಾಗದೆಂದು ಪರಿಗಣಿತವಾದ ಸುಸ್ಥಿ ಸಾಲಗಳ ಬಗ್ಗೆ ತೀರ್ಮಾನ.**

ಟಿಪ್ಪಣಿ : ಅನ್ವಯಿಸುವುದಿಲ್ಲ.

**ವಿಷಯ 34 : ಮಂಡಲಿಯ ನಿರ್ದೇಶಕರುಗಳನ್ನು ತೆಗೆದುಹಾಕುವುದು.**

ಟಿಪ್ಪಣಿ : ಅನ್ವಯಿಸುವುದಿಲ್ಲ.

**ವಿಷಯ 35 : 66ನೇ ಪ್ರಕರಣದ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ.**

ಟಿಪ್ಪಣಿ : ಅನ್ವಯಿಸುವುದಿಲ್ಲ.

**ವಿಷಯ 36 : ಮಂಡಲಿಯಿಂದ ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ನಿರಾಕರಿಸಲಾಗಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ.**

ಟಿಪ್ಪಣಿ : ಅನ್ವಯಿಸುವುದಿಲ್ಲ.

**ವಿಷಯ 37 : ಉಪವಿಧಿ ತಿದ್ದುಪಡಿ.**

ಟಿಪ್ಪಣಿ : ಯಾವುದು ಇರುವುದಿಲ್ಲ.

**ವಿಷಯ 38 : ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ರಚನೆ.**

ಟಿಪ್ಪಣಿ : ಅನ್ವಯಿಸುವುದಿಲ್ಲ.

**ವಿಷಯ 39 : ಸಹಕಾರಿಯ ಸಮಾಪನ.**

ಟಿಪ್ಪಣಿ : ಅನ್ವಯಿಸುವುದಿಲ್ಲ.

**ವಿಷಯ 40 : ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ಪ್ರಕ್ರಿಯೆಗಳು.**

ಟಿಪ್ಪಣಿ : ಯಾವುದೂ ಇರುವುದಿಲ್ಲ.

**ವಿಷಯ 41 : ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.**

ಟಿಪ್ಪಣಿ : ಅಧ್ಯಕ್ಷರ ಅಪ್ಪಣೆಯ ಮೇರೆಗೆ ಯಾವುದೇ ವಿಷಯವನ್ನು ಚರ್ಚಿಸಲು ಇಚ್ಛಿಸುವವರು ದಿನಾಂಕ 31.08.2018ರೊಳಗೆ ಲಿಖಿತವಾಗಿ ಸಂಯುಕ್ತ ಸಹಕಾರಿಯ ಕಛೇರಿಗೆ ವಿಷಯದ ವಿವರ ಸಹಿತ ಕೋರಿಕೆ ಸಲ್ಲಿಸತಕ್ಕದ್ದು. ಅದರಂತೆ ಯಾರಾದರೂ ಕೋರಿಕೆ ಸಲ್ಲಿಸಿದಲ್ಲಿ ಸಾಮಾನ್ಯ ಸಭೆಯ ವೇಳೆಗೆ ಪ್ರತ್ಯೇಕವಾದ ಟಿಪ್ಪಣಿ ನೀಡಲಾಗುವುದು.

ಆಡಳಿತ ಮಂಡಲಿಯ ಅಪ್ಪಣೆಯ ಮೇರೆಗೆ,

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

Karnataka State Souharda Federal Cooperative Ltd.
Reg. No.
RSR / SOU / ACT / 136 /
Regn 051 / 2001-02
dated : 04-01-2002
Bangalore